ಸೃಷ್ಟಿಸಿದಂತಾಗಿತ್ತು! ತೋಳುಗಳಲ್ಲಿ ಬಂದಿಯಾದ ಆಕೆಯನ್ನವರು ಗಟ್ಟಿಯಾಗಿ ಎದೆಗಪ್ಪಿಕೊಳ್ಳುತ್ತ, "ದೇವೀ... ದೇವೀ..." ಎಂದು ಆರ್ದ್ರವಾಗಿ ಪಿಸು ನುಡಿದರು. ದೇವಿಯೂ ಅವರ ಸುದೃಢ ಆಲಿಂಗನದಲ್ಲಿ ಪರವಶಳಾಗಿ ಕರಗತೊಡಗಿದಳು... ಧರೆಗಿಳಿಯುತ್ತಿದ್ದ ತೆಳು ತಿಂಗಳ ಬೆಳಕು; ಗಾಳಿಯಲ್ಲಿ ತೇಲಿ ಬರುತ್ತಿದ್ದ ತೋಟದ ಸಿಂಗಾರ ಹೂವಿನ ಸುಗಂಧ, ಅವರ ತನ್ಮಯತೆಯ ಪರಾಕಾಷ್ಠೆಗೆ ಸಾಕ್ಷಿಯಾಯಿತು.

★★★

ಮೌನವಾಗಿಯೇ... ಅಂತರಂಗದಲ್ಲಿ ಪ್ರೀತಿ ತುಂಬಿಕೊಂಡಿದ್ದ ಒಡೆಯನಿಗೆ ತನ್ನನ್ನು ಸಮರ್ಪಿಸಿಕೊಂಡ ನಿರಾಳತೆ ದೇವಿಯಲ್ಲೀಗ ಮೂಡಿದ್ದರೆ, 'ತನ್ನ ಮೇಲೆ ಇನ್ನಿಲ್ಲದ ವಿಶ್ವಾಸವಿರಿಸಿದ ಸೋಮನಿಗೆ ತಾನು ಎರಡು ಬಗೆಯುವಂತಾಯಿತಲ್ಲ' ಎನ್ನುವ ನೋವು ವಾಸುದೇವರ ಹೃದಯವನ್ನು ಚುಚ್ಚತೊಡಗಿತ್ತು. ಅವರು ಮೌನವಾಗಿಯೇ ಮನೆಯತ್ತ ಹೊರಟಾಗ ಅವರ ತಳಮಳ ಅರಿತಂತೆ ದೇವಿಯೂ ಹಿಂಬಾಲಿಸಿದಳು. ''ಬೇಡ ದೇವಿ. ನೀನು ಗುಡಿಸಲಿಗೆ ಹೋಗು. ಮನೆ ಬಂತಲ್ಲ" ಎಂದವರು ಎಚ್ಚರಿಸಿದಾಗ, "ಆಯ್ತು... ವಾಸಯ್ಯ ಹೊರಟೆ... ಮೊದಲು ನಾನೊಂದು ಮಾತು ಹೇಳ್ತೇನೆ. ಆಗದಾ?" ಎಂದವಳೇ, "ಅಯ್ಯಾ... ಹೀಗೆಲ್ಲಾ ಆಗ್ಬೇಕೂಂತ ದೇವರ ಮನಸ್ಸಲ್ಲಿ ಇತ್ತೋ ಏನೋ?... ಅದಕ್ಕೇ ಯಾವತ್ತೂ ಗುಡಿಸಲಿನತ್ತ ಬಾರದ ನೀವು ಈ ರಾತ್ರಿ ಇಲ್ಲಿಗೆ ಬರುವಂತಾಯ್ತು!... ನನ್ನ ಗಂಡ ಕುಡಿದು ಬಂದಾಗ ನಂಗೆ ಬೇಜಾರಾಗ್ತಿತ್ತು ಹೌದು, ಆದ್ರೆ ನನ್ನನ್ನವರು ಜೀವದಂತೆ ಪ್ರೀತಿಸ್ತಾರೆ. ಅವರು ಮಗುವಿನಂತವರು ಅಯ್ಯ, ಪ್ರತಿ ರಾತ್ರಿ ಕುಡಿದುಬಂದವರು ಹೇಳುವುದು ಒಂದೇ ಮಾತು– "ದೇವಿ ನಿನ್ನನ್ನು ಮದುವೆಯಾಗಿ ತಪ್ಪು ಮಾಡಿದ್ನೇನೋ? ಏನು ದೋಷವೋ... ಕರ್ಮವೋ... ನಿಂಗೆ ಸುಖ ಕೊಡುವುದು ನನ್ನಿಂದಾಗ್ತಿಲ್ಲ... ಹೀಗೆ ಎಷ್ಟು ಕಾಲ ನನ್ನನ್ನು ಸಹಿಸ್ತಿ ನೀನು?... ಒಡೆಯನಿಗೆ ನಿನ್ನ ಕಂಡ್ರೆ ತುಂಬಾ ಪ್ರೀತಿ... ನೀನು... ನೀನು..." ಎಂದು ಅರ್ಧಕ್ಕೆ ನಿಲ್ಸಿ ಕಣ್ಣೀರು ಹಾಕ್ತಾರೆ... ಮಗುವಿನಂತವರಿಗೆ ಅನ್ಯಾಯ ಮಾಡಲು ಮನಸ್ಸಾಗದೆ ನಾನು ಸುಮ್ಮನುಳಿದಿದ್ದೆ ಅಯ್ಯ... ನನಗೆ ರಾತ್ರಿ ಸುಖ ಕೊಡದಿರಬಹುದು, ಆದರೆ ತೋರುವ ಪ್ರೀತಿಗೆ ಎಣೆಯಿಲ್ಲ... ನೀವು ನಮಗೆ ದೇವರ ಸಮ" ಎಂದು ಗದ್ಗದಿತಗಳಾಗಿ ನುಡಿದಳು.

ದೇವಿಯ ಮಾತುಗಳನ್ನು ಕೇಳಿಸಿಕೊಂಡ ವಾಸುದೇವರಿಗೆ ಅಪರಾಧಿ ಪ್ರಜ್ಞೆಯ ಭಾರ ಒಮ್ಮೆಲೆ ಕಮ್ಮಿಯಾದಂತೆನಿಸಿತು. ಅದರೊಂದಿಗೆ, ಸೋಮ ಎಷ್ಟೇ ಅಸಹಾಯಕನಾದರೂ ದೇವಿಗಾಗಿ ಈ ಮಟ್ಟಿನ ಉದಾರತೆ, ಹೃದಯ ವೈಶಾಲ್ಯ ಹೊಂದಿದ್ದನ್ನು ತಿಳಿದು ಸೋಜಿಗವೂ ಆಯಿತು!

"ಹೌದು ದೇವೀ, ಎಲ್ಲವೂ ದೈವೇಚ್ಛೆ ಎಂದೇ ತಿಳಿ, ನೊಂದುಕೊಳ್ಳಬೇಡ... ಹೋಗು... ಸೋಮನೊಂದಿಗೆ ಊಟಮಾಡಿ ಆರಾಮವಾಗಿ ನಿದ್ದೆ ಮಾಡು" ಎಂದು ಆಕೆಯನ್ನು ಇನ್ನೊಮ್ಮೆ ಆಲಂಗಿಸಿ ಬೀಳ್ಕೊಟ್ಟರು... ಮುಗ್ಧ ದೇವಿಯ ಮಿಲನದ ಮಾಧುರ್ಯದ ನೆನಪಲ್ಲಿ ಉಲ್ಲಾಸದಿಂದಲೇ ಅವರು ಮನೆಗೆ ಬಂದು ಸೇರಿದರು.

★★★

ಇದಾಗಿ ವಾರ ಕಳೆಯುವಷ್ಟರಲ್ಲಿ ವಾಸುದೇವರ ತಾಯಿ ಬಚ್ಚಲು ಮನೆಯಲ್ಲಿ ಬಿದ್ದು ಬಲಗಾಲು ಮುರಿದುಕೊಂಡರು. ಅವರಿಗೆ ನೆರವಾಗಲೆಂದು ದೇವಿಯನ್ನು ಮನೆಗೆಲಸಕ್ಕೆ ಬರುವಂತೆ ವಾಸುದೇವರು ಹೇಳಿದ್ದೂ ಆಯಿತು.